-   -   **ECA No. 25/2019**

**PW- 1**

**ದಿನಾಂಕಃ 25-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.ಎಸ್ ವಿ ಕೆ ವಕೀಲರಿಂದಃ**

1. ಮೃತ ಚನ್ನಬಸಪ್ಪ ನನ್ನ ಮಾವ. ಆತ ನನ್ನ ಹೆಂಡತಿಯ ಸಹೋದರ. ಆತ ನನ್ನೊಂದಿಗೆ ಕೂಲಿ ಕೆಲಸ ಮೈಕೊ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂದು ದಾಖಲೆ ತೋರಿಸಿಲ್ಲ. ನಾನು ಕೂಡಾ ಆ ಕಂಪನಿಯಲ್ಲಿ ಕೆಲಸ ಮಾಡುತ್ತೇನೆ ಎಂದು ಯಾವುದೇ ದಾಖಲೆ ತೋರಿಸಿಲ್ಲ. ನಾನು ಮೈಕೋ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಎದುರುದಾರನ ಮಾತು ಕೇಳಿ ಶೇಂಗಾ ತರಲು ಮೃತ ವ್ಯಕ್ತಿ ಹೋಗಿದ್ದಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಚನ್ನಬಸಪ್ಪ ಹೇಗೆ ತೀರಿಕೊಂಡಿದ್ದ ಎಂದು ನನಗೆ ಗೊತ್ತಿಲ್ಲ. ಕಂಪನಿಯವರು ಜೀಪನ್ನು ತೆಗೆದುಕೊಂಡು ಹೋಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಕಂಪನಿಯವರು ಮಾನವಿಯತ್ತೆ ದೃಷ್ಟಿಯಿಂದ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ನಿಜ. ನಾನು ಆ ಜೀಪಿನಲ್ಲಿ ಅವರೊಂದಿಗೆ ಹೋಗಿದೆ. ಪೋಲಿಸರು ನನಗೆ ನೋಟಿಸ್ ಕೊಟ್ಟಿಲ್ಲ ಪೋಲಿಸರ ಮುಂದೆ ನಾನು ಹೇಳಿಕೆ ನೀಡಿಲ್ಲ. ಮೃತ ವ್ಯಕ್ತಿ ನನ್ನ ಮಾವ ಇರುವ ಕಾರಣ ಆತನ ಸಂಬಂಧಿಕರಿಗೆ ಪರಿಹಾರ ವದಗಿಸಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫಸಿ, ರಾಣೆಬೆನ್ನೂರ.

ಸಾಕ್ಷಿದಾರರ ಸಹಿಃ

-   -   **ECA No. 25/2019**

**PW- 1**

**ದಿನಾಂಕಃ 25-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

1. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ದೂರನ್ನು ಬರೆಯಲು ಹೇಳಿಲ್ಲ. ಸದರಿ ಮೃತನ ಸಂಬಂಧಿಕರಿಗೆ ಪರಿಹಾರ ವದಗಿಸಬೇಕೆಂಬ ಉದ್ದೇಶಕ್ಕಾಗಿ ಈ ದೂರನ್ನು ದಾಖಲಿಸಲಾಗಿದೆ ಎಂದರೆ ನಿಜ. ನಾನು ಈಗಲೂ ಆರ್ 2 ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಅಲ್ಲಿ ಕೆಲಸಕ್ಕೆ ಹೋಗುವ ಪೂರ್ವಲ್ಲಿ ಹಾಜರಾತಿಯ ಮೇಲೆ ಸಹಿ ಮಾಡಿ ಹೋಗುತ್ತೇವೆ ಎಂದರೆ ನಿಜ. ಅಲ್ಲಿ ಒಳಗಡೆ ಹೋದ ನಂತರ ಕೆಲಸ ಏನು ಮಾಡಬೇಕೆಂದು ತಿಳಿಸುತ್ತಾರೆ ಎಂದರೆ ನಿಜ. ಕಳೆದ 18 ವರ್ಷದಿಂದ ನಾನು ಕೆಲಸ ಮಾಡುತ್ತಿದ್ದು ಆ ರೀತಿಯ ಪದ್ದತಿ ಅಲ್ಲಿ ಇದೆ. ಚನ್ನಬಸಪ್ಪ ತೀರಿಕೊಂಡ ಜಮೀನು ರೈಲ್ವೆ ಹಳಿಯ ಪಕ್ಕದಲ್ಲಿ ಇದೆ ಎಂದರೆ ನಿಜ. ಅಲ್ಲಿ ವಾಹನಗಳು ಓಡಾಟ ಇಲ್ಲ ಎಂದರೆ ನಿಜ.

2. ಮಾನವೀಯತೆ ದೃಷ್ಟಿಯಿಂದ ಎದುರುದಾರ ನಂ. 2 ರವರು ಆಸ್ಪತ್ರೆಗೆ ಸಾಗಿಸಿರುತ್ತಾರೆ ಎಂದರೆ ನಿಜ. ಮಂಜಪ್ಪ ಓಲೆಕಾರ ಎತ್ತು ಮತ್ತು ಚಕ್ಕಡಿ ಇಲ್ಲದ ಕಾರಣ ಬಸವಣ್ಯೆಪ್ಪ ಇತನ ಎತ್ತು ಮತ್ತು ಚಕ್ಕಡಿ ಉಪಯೋಗಿಸುತ್ತಿದ್ದರು ಎಂದರೆ ನಿಜ. ಬಸವಣ್ಯೆಪ್ಪನ ಧನ ಮತ್ತು ಕರುಗಳು ಇವೆ ಎಂದರೆ ನಿಜ. ಶೇಂಗಾ ಹೊಟು ಬಸವಣ್ಯೆಪ್ಪನ ಧನ ಕರುಗಳಿಗೆ ಬೇಕಾಗಿತ್ತು ಎಂದರೆ ನಿಜ. ಸದರಿ ಶೇಂಗಾ ಹೊಟ್ಟನ್ನು ತೆಗೆದುಕೊಂಡು ಬರಲು ಬಸವಣ್ಯೆಪ್ಪ ಮತ್ತು ಓಲೇಕಾರ ಮಂಜಪ್ಪ ಮೃತ ಚನ್ನಬಸಪ್ಪನನ್ನು ಕರೆದುಕೊಂಡು ಹೋಗಿದ್ದರು ಎಂದರೆ ನಿಜ. ಆ ದಿನ ಮೃತ ಚನ್ನಬಸಪ್ಪ ಕಂಪನಿಯ ಕೆಲಸಕ್ಕೆ ಗೈರು ಹಾಜರು ಇದ್ದರು ಎಂದರೆ ನಿಜ. ಚನ್ನಬಸಪ್ಪ, ಮಂಜಪ್ಪ ಮತ್ತು ಬಸವಣ್ಯೆಪ್ಪ 3 ಜನ ಮಾತನಾಡಿಕೊಂಡು ಶೇಂಗಾ ಹೊಟ್ಟನ್ನು ತೆಗೆದುಕೊಂಡು ಬರುವಾಗ ಈ ಅಪಘಾತ ಸಂಭವಿಸಿದೆ ಎಂದರೆ ನಿಜ.

3. ಎದುರುದಾರ 2 ರ ಕಂಪನಿಯ ಮ್ಯಾನೇಜರ್ ಮತ್ತು 3 ನೇ ಎದುರುದಾರರು ಹಾಗೂ ಕಂಪನಿ ಸದರಿ ಹೊಟ್ಟನ್ನು ತೆಗೆದುಕೊಂಡು ಬರಲು ಸೂಚಿಸಿಲ್ಲಾ ಎಂದರೆ ನಿಜ. ಅಪಘಾತ ಕಂಪನಿಯ ಕೆಲಸದಲ್ಲಿದ್ದಾಗ ಆಗಿಲ್ಲ ಎಂದರೆ ನಿಜ. ಅಪಘಾತದ ದಿನ ಎದುರುದಾರ 2 ಕಂಪನಿಗೆ ಚನ್ನಬಸಪ್ಪ ಕಾರ್ಮಿಕನಲ್ಲ ಮತ್ತು ಅದೇ ದಿನ 2 ನೇ ಎದುರುದಾರ ಮಾಲೀಕನಿರಲಿಲ್ಲ ಎಂದರೆ ನಿಜ.

**ECA No. 25/2019**

**PW- 1**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದಃ**

1. 3 ನೇ ಎದುರುದಾರ 2 ನೇ ಎದುರುದಾರ ಕಂಪನಿಯಲ್ಲಿ ಸಹಾಯಕ ಸಂಶೋದಕರು ಅಂತಾ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ಸದರಿಯವರ ಕೆಲಸ ಕಂಪನಿಯ ಸಂಶೋದನೆಯ ಮೇಲುಉತ್ಸುವಾರಿ ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ಕಂಪನಿಗೆ ಸಂಬಂಧಿಸಿದಂತಹ ರಾಣೇಬೆನ್ನುರಿನಲ್ಲಿ ಆಸ್ತಿಯನ್ನು ಹೊರತು ಪಡಿಸಿ ಬೇರೆ ಕಡೆ ಯಾವುದೇ ಭೂಮಿಯನ್ನು ಗುತ್ತಿಗೆ ಆದಾರದ ಮೇಲೆ ಪಡೆದಿಲ್ಲ ಎಂದರೆ ನಿಜ. 3 ನೇ ಎದುರುದಾರ ಮತ್ತು ಮೃತ ಚನ್ನಬಸಪ್ಪನಿಗೆ ಯಾವುದೇ ಸಂಬಂದ ಇಲ್ಲ ಎಂದರೆ ನಿಜ. 3 ನೇ ಎದುರುದಾರ 2 ನೇ ಎದುರುದಾರ ಕಂಪನಿಯ ಒಬ್ಬ ನೌಕರಸ್ಥ ಅಂದರೆ ನಿಜ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫಸಿ, ರಾಣೆಬೆನ್ನೂರ.

ಸಾಕ್ಷಿದಾರರ ಸಹಿಃ